ತುಂಬಾ ದಿನವಾಯಿತು ಎಂದಿದ್ದನ್ನು ಅಮ್ಮ ನನಗೆ ತಿಳಿಸಿದಳು. ಅಪ್ಪ ಹುಷಾರು ತಪ್ಪಿದ ಮೇಲೆ ನಾನು ಯಾವ ಬಂಧುಗಳ ಮನೆಗೂ ಹೋಗಿರಲಿಲ್ಲ. ನನಗೂ ಮೈಸೂರಿಗೆ ಹೋಗಿ ಬರುವ ಮನಸ್ಸಾಗಿ ಅಮ್ಮನಿಗೆ ದೊಡ್ಡಮ್ಮನನ್ನು ಮಾತನಾಡಿಸಿಕೊಂಡು ರಾತ್ರಿ ಬರುತ್ತೇನೆ ಎಂದು ಹೇಳಿ ಹೊರಟೆ. ದೊಡ್ಡಮ್ಮ ನಾನು ಅವರ ಮನೆಗೆ ಹೋದಾಗ ತುಂಬಾ ಸಂತೋಷಗೊಂಡರು. ಒಬ್ಬಟ್ಟು ಮಾಡಿಕೊಂಡು ಅಡುಗೆ ಮನೆಯಲ್ಲಿಯೇ ನನ್ನನ್ನು ಕುಳ್ಳಿರಿಸಿಕೊಂಡು ಕಷ್ಟಸುಖಗಳ ಬಗೆಗೆ ಮಾತನಾಡಿದರು. ಹೊರಗೆ ಹೋಗಿದ್ದ ದೊಡ್ಡಪ್ಪ ಬಂದು ನನ್ನನ್ನು ಅಕ್ಕರೆಯಿಂದ ಮಾತನಾಡಿಸಿ ಅಪ್ಪನ ಆರೋಗ್ಯದ ವಿಚಾರವಾಗಿ ಒಂದಷ್ಟು ಅನುಕಂಪದ ಮಾತನಾಡಿದರು. ಅಣ್ಣ ಆಟೋದಲ್ಲಿ ಬಂದವನು ನನ್ನನ್ನು ನೋಡಿ 'ಓಹೋ.. ಏನಮ್ಮಾ ಹೀರೋಯಿನ್ನೂ.. ಇಷ್ಟು ಎತ್ತರವಾಗಿ ಬೆಳೆದುಬಿಟ್ಟಿದ್ದೀಯಾ..! ನಿನಗೆ ಸರಿಯಾದ ಹೀರೋನನ್ನು ನಾವು ಎಲ್ಲಿಂದ ಹುಡುಕಿ ತರೋದು.' ಎಂದು ತಮಾಷೆ ಮಾಡಿ ದೊಡ್ಡದಾಗಿ ನಕ್ಕ. ನನಗೆ ಒಳಗೊಳಗೆ ಖುಷಿಯಾಯಿತು. ನಾವೆಲ್ಲಾ ಊಟ ಮಾಡಿದ ಮೇಲೆ ನಾನು ಬೆಳಿಗ್ಗೆ ಬೆಂಗಳೂರಿಗೆ ಹೋಗಬೇಕು ಬರುತ್ತೇನೆ ಎಂದು ಸಿದ್ಧಳಾದೆ. ಅಣ್ಣ ಬಿಡಲಿಲ್ಲ. ಅಪರೂಪಕ್ಕೆ ಬಂದಿದ್ದೀಯಾ.. ಈವತ್ತು ರಾತ್ರಿ ಇಲ್ಲೇ ಇದ್ದು ಬೆಳಗ್ಗೆ ಇಲ್ಲಿಂದಲೇ ಬೆಂಗಳೂರಿಗೆ ಹೋಗು.. ಚಿಕ್ಕಮ್ಮನಿಗೆ ಫೋನು ಮಾಡಿ ಹೇಳುತ್ತೇನೆ.. ಬೆಳಿಗ್ಗೆ ಬಸ್‌ಸ್ಟ್ಯಾಂಡಿಗೆ ಬಿಡುತ್ತೇನೆ ಎಂದು ಅಲವತ್ತುಕೊಂಡ. ಫಕ್ಕನೇ ನನ್ನ ಮನಸ್ಸಿನಲ್ಲಿ ಮಿಂಚು ಹೊಳೆದಂತಾಗಿ, ಅಣ್ಣಾ.. ಮೈಸೂರು–ತಿರುಪತಿ ಬಸ್ಸು ಬೆಳಿಗ್ಗೆ ಎಷ್ಟು ಹೊತ್ತಿಗೆ ಹೊರಡುತ್ತದೆ ಎಂದು ಕೇಳಿದೆ. ನಾಲ್ಕೂವರೆಗೆ ಎಂದು ತಿಳಿಸಿದವನು ಬೆಳಿಗ್ಗೆ ನಾನು ಆಟೋದಲ್ಲಿ ಡ್ರಾಪ್ ಮಾಡುತ್ತೇನೆ ಎಂದು ಭರವಸೆ ನೀಡಿದ.

ನಾನು ಎಲ್ಲರ ಜೊತೆ ಮಾತನಾಡಿಕೊಂಡು ದೊಡ್ಡಮ್ಮನ ಪಕ್ಕದಲ್ಲಿ ಮಲಗಿದಾಗ ಆಗಲೇ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಕಣ್ಣುಮುಚ್ಚಿದರೂ ನನಗೆ ನಿದ್ರೆ ಬರಲಿಲ್ಲ. ಎಷ್ಟು ಬೇಗ ಬೆಳಕಾಗುತ್ತದೋ ಎಂದು ನನ್ನ ಮನಸ್ಸು ಇನ್ನಿಲ್ಲದಂತೆ ಚಡಪಡಿಸುತಿತ್ತು. ಯಾವಾಗ ನಿದ್ರೆ ಹತ್ತಿತೆಂದು ತಿಳಿಯಲಿಲ್ಲ. ದೊಡ್ಡಮ್ಮ ಎದ್ದು ಹೇಮಾ ನಾಲ್ಕು ಗಂಟೆಯಾಗುತ್ತಿದೆ.. ಎಂದು ಎಬ್ಬಿಸಿದಾಗ ದಡಬಡನೆ ಎದ್ದು ಹತ್ತು ನಿಮಿಷದಲ್ಲಿ ಸ್ನಾನ ಮಾಡಿ ಸಿದ್ಧಳಾದೆ. ಅಷ್ಟರಲ್ಲಿ ಅಣ್ಣನೂ ಎದ್ದು ಕುಳಿತಿದ್ದ. ಅವನ ಆಟೋದಲ್ಲಿ ಮೈಸೂರಿನ ಬಸ್ ನಿಲ್ದಾಣಕ್ಕೆ ಬಂದಾಗ ಆಗಲೇ ಮೈಸೂರು–ತಿರುಪತಿ ಬಸ್ಸು ಹೊರಡಲು ಸಿದ್ಧವಾಗಿ ನಿಂತಿತ್ತು. ಆತುರಾತುರವಾಗಿ ಬಸ್ಸು ಹತ್ತಿದೆ. ನನ್ನ ಕಣ್ಣುಗಳು ಕಾತುರದಿಂದ ಅವರನ್ನು ಹುಡುಕುತಿದ್ದವು. ಅವರು ಮುಂದಿನ ಸೀಟಿನಲ್ಲಿ ಕುಳಿತಿದ್ದರು..! ನನ್ನ ಹೃದಯ ಸಣ್ಣದಾಗಿ ಬಡಿದುಕೊಳ್ಳತೊಡಗಿತು. ಮುಂದೆ ಹೋಗಿ ಅವರ ಪಕ್ಕದಲ್ಲಿ ನಿಶ್ಶಬ್ದವಾಗಿ ಕುಳಿತೆ..! ಅವರಿಗೆ ನನ್ನನ್ನು ಅಲ್ಲಿ ಕಂಡು ಆಶ್ಚರ್ಯವಾಗಿರಬೇಕು.. ಅದನ್ನು ವ್ಯಕ್ತಪಡಿಸಿಯೇಬಿಟ್ಟರು. ನಾನು ನಿಜವನ್ನೇ ತಿಳಿಸಿದೆ. ಅಂದು ಅವರ ಬಳಿ ಏನೂ ಮಾತನಾಡದೆ ಪ್ರಯಾಣದ ಉದ್ದಕ್ಕೂ ಅವರ ಸನಿಹದ ಸುಖವನ್ನು ಅನುಭವಿಸತೊಡಗಿದೆ. ಅದೊಂದು ವರ್ಣಿಸಲಾರದ ಸುಖ.. ನಾನು ನನ್ನ ಜೀವನದಲ್ಲಿಯೇ ಅಂತಹ ಸುಖವನ್ನು ಎಂದೂ ಅನುಭವಿಸಿರಲಿಲ್ಲ.. ಅಂದು ಮೊದಲ ಬಾರಿಗೆ ನನಗೆ ಅವರೊಂದಿಗೆ ಎಂದೆಂದಿಗೂ ಜೊತೆಯಾಗಿರಬೇಕು.. ಜೀವನಪೂರ್ತಿ ಅವರ ಸನಿಹದ ಸುಖವನ್ನು ಅನುಭವಿಸಬೇಕು.. ಈ ನನ್ನ ದೇಹ ಮತ್ತು ಮನಸ್ಸನ್ನು ಅವರಿಗಾಗಿಯೇ ಮೀಸಲಾಗಿಡಬೇಕು.. ಸದಾ ಅವರ ಎದೆಯಲ್ಲಿ ತಲೆಯಿಟ್ಟು ಮಲಗಬೇಕು.. ಎನಿಸಿ ನನ್ನ ಮೈಮನಸ್ಸುಗಳು ಭಾವಲೋಕದಲ್ಲಿ ವಿಹರಿಸತೊಡಗಿದವು.

ಅವರೊಂದಿಗಿನ ದೀರ್ಘ ಪಯಣದ ಅಂದಿನ ಉಲ್ಲಾಸ, ಉತ್ಸಾಹಗಳು ನನ್ನ ನೆನಪಿನಲ್ಲಿ ಇಂದೂ ಹಚ್ಚಹಸಿರಾಗಿವೆ! ಅದಾದ ಮೇಲೆ ನಾನು ಏನೇನೋ ನೆಪ ಮಾಡಿಕೊಂಡು ಐದಾರು ಬಾರಿ ಮೈಸೂರಿನಿಂದಲೇ ಬಸ್ಸು ಹತ್ತಿ ಅವರ ಸನಿಹದ ಸುಖವನ್ನು ಅನುಭವಿಸತೊಡಗಿದೆ. ಅಂತಹ ಒಂದು ಸುಖದ ಕೊನೆಯಲ್ಲಿ ದುಃಖವೊಂದು ನನಗಾಗಿ ಕಾದಿತ್ತೆಂದು ನನಗೆ ತಿಳಿದಿರಲಿಲ್ಲ. ಅದೊಂದು ದಿನ ಮೈಸೂರಿನಲ್ಲಿ ತಿರುಪತಿ ಬಸ್ಸು ಹತ್ತಿದಾಗ ಅವರನ್ನು ಕಾಣದೇ ಕಂಗಾಲಾಗಿ ಹೋಗಿ ತಕ್ಷಣವೇ ಕೆಳಗಿಳಿದವಳು ಯಾವುದೋ ಕಾರಣದಿಂದ ವಿಳಂಬವಾಗಿರಬಹುದು... ಅವರು ಇನ್ನೊಂದು ಬಸ್ಸಿಗೆ ಬರಬಹುದೆಂದು ರಾಮನಿಗಾಗಿ ಕಾದು ಕುಳಿತ ಶಬರಿಯಂತೆ ಕಾದು ಕುಳಿತೆ. ಅವರು ಬರಲಿಲ್ಲ.. ತೀವ್ರ ಖಿನ್ನಳಾಗಿ ಒಂಟಿಯಾಗಿ ಬಸ್ಸು ಹತ್ತಿ ಬೆಂಗಳೂರಿಗೆ ಬಂದೆ. ಅಂದು ಆ ಏಕಾಂಗಿ ಪ್ರಯಾಣದಲ್ಲಿ ನಾನು ಅನುಭವಿಸಿದ ವೇದನೆ, ಯಾತನೆಗಳು ನನಗೆ ಮಾತ್ರ ತಿಳಿದಿವೆ. ಅವುಗಳನ್ನು ಶಬ್ದಗಳಲ್ಲಿ ವರ್ಣಿಸಲಾಗದು. ಫ್ಯಾಕ್ಟರಿಯಲ್ಲಿ ನಿರುತ್ಸಾಹಳಾಗಿ ಕೆಲಸ ಮಾಡಿ ರೂಮಿಗೆ ಬಂದಾಗ ನನಗೆ ಏನೂ ಬೇಡವಾಗಿತ್ತು. ರಾತ್ರಿಯ ಅಡುಗೆಯನ್ನೂ ಮಾಡದೇ ಉಟ್ಟ ಬಟ್ಟೆಯಲ್ಲಿಯೇ ಚಾಪೆ ಹಾಸಿಕೊಂಡು ಮಲಗಿದೆ. ಮೊಬೈಲ್ ತೆಗೆದುಕೊಂಡು ಯಾಕೆ ಬರಲಿಲ್ಲವೆಂದು ಸಂದೇಶಗಳ ಮೇಲೆ ಸಂದೇಶಗಳನ್ನು ಕಳುಹಿಸಿದೆ. ಒಂದಕ್ಕೂ ಉತ್ತರ ಬರಲಿಲ್ಲ. ಆ ರಾತ್ರಿ ಹೇಗೆ ಕಳೆದೆನೆಂದು ನನಗೆ ತಿಳಿಯಲಿಲ್ಲ. ಮುಂದಿನ ವಾರ ಸಿಗಬಹುದೆಂಬ ಭರವಸೆಯಿಂದ ಆ ವಾರವನ್ನು ಕಳೆದೆ.

ಮುಂದಿನ ವಾರವೂ ಅವರು ಸಿಗಲಿಲ್ಲ.. ಮತ್ತೊಂದು ವಾರ ಕಳೆದೆ.. ಅವರು ಸಿಗಲೇ ಇಲ್ಲ. ನನಗೆ ತಡೆಯಲಾಗಲಿಲ್ಲ. ಕಾರಣಗಳನ್ನು ಕೇಳಿ ನೂರೆಂಟು ಸಂದೇಶಗಳನ್ನು ಕಳುಹಿಸಿದೆ. ಒಂದಕ್ಕೂ ಉತ್ತರವಿಲ್ಲ..! ಯಾಕೆ..? ನಾನೇನು ತಪ್ಪು ಮಾಡಿದೆ..? ಅಥವಾ ಅವರ ಕಾರ್ಖಾನೆಯ ಕೆಲಸದಲ್ಲಿ ಬ್ಯುಸಿಯಾಗಿ ಮೈಸೂರಿಗೆ ಬರದೇ ಬೆಂಗಳೂರಿನಲ್ಲಿಯೇ ಉಳಿಯುತ್ತಿದ್ದಾರಾ..? ಎಷ್ಟೇ ಯೋಚಿಸಿದರೂ ಕಾರಣ ತಿಳಿಯಲಿಲ್ಲ. ಆದರೆ ಆ ಎಲ್ಲಾ ಯೋಚನೆಗಳ ನಂತರ ಅವರು ಉದ್ದೇಶಪೂರ್ವಕವಾಗಿಯೇ ನನಗೆ ಸಿಗದೆ ನನ್ನಿಂದ ತಪ್ಪಿಸಿಕೊಳ್ಳುತ್ತಿದ್ದಾರೆಯೇ ಎನಿಸಿದಾಗ ನನ್ನ ಮೈಯ್ಯೆಲ್ಲಾ ಭೀತಿಯಿಂದ ನಡುಗಿಹೋಯಿತು..! ನಾನು ಇಷ್ಟು ದಿವಸ ಕಟ್ಟಿಕೊಂಡ ಕನಸುಗಳು ನನ್ನ ಕಣ್ಣೆದುರೇ ನುಚ್ಚುನೂರಾದಂತೆ ಅನಿಸಿ ನನ್ನ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಹರಿಯಿತು. ಅವರನ್ನು ಬಿಟ್ಟು ನಾನು ಬದುಕಬಲ್ಲೆನೇ..? ಇಲ್ಲಾ.. ಇಲ್ಲಾ.. ಅದೆಂದಿಗೂ ಸಾಧ್ಯವಿಲ್ಲ. ತಕ್ಷಣವೇ ಅವರ ಬಳಿ ಮಾತನಾಡಿಯೇ ಬಿಡಬೇಕು.. ನಾನು ನಿಮ್ಮನ್ನು ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತಿದ್ದೇನೆ ಎಂದು ಹೇಳಿಬಿಡಬೇಕು.. ನೀವಿಲ್ಲದೆ ನಾನು ಬದುಕಲಾರೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು.. ಎಂದು ಫೋನನ್ನು ಕೈಗೆತ್ತಿಕೊಂಡೆ. ಆದರೆ ಧೈರ್ಯ ಬರಲಿಲ್ಲ.. ನಾನು ಅವರು ತುಂಬಾ ಬ್ಯುಸಿಯಾಗಿರುತ್ತಾರೆ ಎಂದುಕೊಂಡು ಎಂದೂ ಅವರಿಗೆ ಫೋನು ಮಾಡಿರಲಿಲ್ಲ..

ನನ್ನಲ್ಲಿದ್ದ ಧೈರ್ಯವನ್ನೆಲ್ಲಾ ಒಗ್ಗೂಡಿಸಿಕೊಂಡು ನಾನು ನಡುಗುತ್ತಿದ್ದ ಕೈಯ್ಯಿಂದಲೇ ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆಂದು ನನ್ನೆಲ್ಲಾ ಭಾವನೆಗಳನ್ನು ಸೇರಿಸಿ ಒಂದು ಸಂದೇಶವನ್ನು ಟೈಪು ಮಾಡಿ ಕಳುಹಿಸಿಯೇ ಬಿಟ್ಟೆ. ಆದರೆ ಅದಕ್ಕೂ ಯಾವುದೇ ಉತ್ತರ ಬರಲಿಲ್ಲ.. ಅವರು ನೋಡಿಲ್ಲದಿರಬಹುದು.. ನೋಡಿದ ಮೇಲೆ ಒಂದು ಸಂದೇಶವನ್ನು ಖಂಡಿತವಾಗಿ ಕಳುಹಿಸುತ್ತಾರೆ ಎಂದುಕೊಂಡು ಮೊಬೈಲ್ ಫೋನನ್ನು ಕೈಯ್ಯಲ್ಲಿಯೇ ಹಿಡಿದುಕೊಂಡು ಆ ರಾತ್ರಿಯನ್ನು ನಿದ್ರೆಯಿಲ್ಲದೆ ಕಳೆದೆ. ಬೆಳಗಾದರೂ ಅವರಿಂದ ಯಾವುದೇ ಸಂದೇಶ ಬರಲೇ ಇಲ್ಲ... ನನಗೆ ಅವರು ನನ್ನನ್ನೂ ನನ್ನ ಪ್ರೀತಿಯನ್ನೂ ಸ್ವೀಕರಿಸುವುದಿಲ್ಲವೇನೋ ಎಂಬ ಸಂದೇಹವೊಂದು ಮೂಡಿ ನನ್ನ ಹೃದಯದಲ್ಲಿ ಅಗಾಧವಾದ ನೋವೊಂದು ಕಾಣಿಸಿಕೊಂಡಿತು.

ಮುಂದೇನು ಗತಿ..? ಎಂದು ಚಿಂತಿಸಿಕೊಂಡು ಮಲಗಿದ್ದವಳು ಎದ್ದು ಕುಳಿತೆ. ನನ್ನನ್ನು ತಿರಸ್ಕರಿಸುವಂತಹ ಕೊರತೆಯಾದರೂ ನನ್ನಲ್ಲೇನಿದೆ..? ಅವರು ನನ್ನ ಸಂದೇಶಗಳನ್ನು ಲಘುವಾಗಿ ಪರಿಗಣಿಸಿರಬಹುದು.. ಅವರನ್ನು ಭೇಟಿ ಮಾಡಿ ಪ್ರೇಮ ನಿವೇದನೆ ಮಾಡಿಕೊಳ್ಳಬೇಕು.. ಅವರನ್ನು ನಾನೆಷ್ಟು ಪ್ರೀತಿಸುತ್ತಿದ್ದೇನೆಂದು ಅವರಿಗೆ ಮನವರಿಕೆ ಮಾಡಿಕೊಡಬೇಕು.. ಅಥವಾ ಅವರು ಬೇರೆ ಯಾರನ್ನಾದರೂ ಪ್ರೀತಿಸುತ್ತಿದ್ದಾರೇನೋ ಎನಿಸಿದರೂ ತಕ್ಷಣವೇ ಅಂತಹ ಸಂಭವನೀಯತೆಗಳು ಕಡಿಮೆ ಎನಿಸಿತು. ಇಷ್ಟು ದಿನಗಳ ಒಡನಾಟದಲ್ಲಿ ಅದರ ಬಗ್ಗೆ ನನಗೆ ಹೇಳದೇ ಇರುತ್ತಿರಲಿಲ್ಲ.. ಏನಾದರೂ ಇರಲಿ.. ಇದು ನನ್ನ ಪ್ರೀತಿಯ ಸತ್ವಪರೀಕ್ಷೆಯ ಕಾಲ.. ಈ ಪರೀಕ್ಷೆಯಲ್ಲಿ ಗೆದ್ದರೆ ಜೀವನವೆಲ್ಲಾ ಸುಖಮಯ.. ಸೋತರೆ ಏನೆಂಬುದನ್ನು ಕಾಲವೇ ನಿರ್ಧರಿಸುತ್ತದೆ ಎಂದುಕೊಂಡು ಮನಸ್ಸಿಗೆ ತುಸು ಸಮಾಧಾನ ತಂದುಕೊಂಡು ಸಿದ್ಧವಾಗತೊಡಗಿದೆ.

**(ಸಶೇಷ)**